ಸಾಕ್ಷಿ ಈ ದಿನ ದಿನಾಂಕ 09.09.2024 ರಂದು ಹಾಜರು ಇಲ್ಲ. ಒಂದರಿಂದ ನಾಲ್ಕನೇ ಪ್ರತಿವಾದಿ ಪರ ವಕೀಲರು ಸಲ್ಲಿಸಿರುವ ದಿನಾಂಕ 09.09.2024 ರ ಮೇಮೋದ ಮೇಲಿನ ಆದೇಶದ ಮೇರೆಗೆ ಸಾಕ್ಷಿ ವಿಚಾರಣೆಯನ್ನು ತಿರಸ್ಕರಿಸಿದೆ ಮತ್ತು ಸಾಕ್ಷಿ ವಿಚಾರಣೆಯನ್ನು ಮುಕ್ತಾಯಗೊಳಿಸಿದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಕೇಳಿ, ಅವರು ಹೇಳಿದಂತೆಯೇ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಕೊಂಡು, ನಂತರ ಓದಿ ಹೇಳಲಾಯಿತು ಎಂದು ಈ ಮೂಲಕ ಪ್ರಮಾಣಿಕರಿಸಲಾಗಿದೆ.)

ಓ ಹೇ ಕೇ ಸರಿ ಇದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.

ಸಾಕ್ಷಿಯನ್ನು ಈ ದಿನ ದಿನಾಂಕ 09.09.2024 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯನ್ನು ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಆರ್ ಎಮ್ ಎಮ್ ವಕೀಲರಿಂದಃ ಎರಡರಿಂದ ನಾಲ್ಕನೇ ಪ್ರತಿವಾದಿಯರ ಪರವಾಗಿಃ**

ನನ್ನ ಮುಖ್ಯವಿಚಾರಣೆಯ ಸಾಕ್ಷಿಯ ಬಗ್ಗೆ ನಾನು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯಗಳು ಸತ್ಯವಾಗಿರುತ್ತವೆ.

ದಿನಾಂಕ **31.12.2021** ರಂದು ವಾದಿ ಮೂರನೇ ಪ್ರತಿವಾದಿಗೆ ನೀಡಿರುವ ಪತ್ರವನ್ನು ಹಾಜರು ಪಡಿಸಿರುತ್ತೇನೆ. ಅದನ್ನು ನಿಡಿ-**31** ಎಂದು ಗುರುತಿಸಲಾಯಿತು. ನಾಲ್ಕನೇ ಪ್ರತಿವಾದಿ ದಿನಾಂಕ **10.03.2011** ರಂದು ನೀಡಿರುವ ಕಾರ್ಯಾದೇಶ, ಒಂದನೇ ಪ್ರತಿವಾದಿ ಮೂರನೇ ಪ್ರತಿವಾದಿಗೆ ದಿನಾಂಕ **13.09.2011** ರಂದು ಬರೆದಿರುವ ಪತ್ರ, ಎರಡನೇ ಪ್ರತಿವಾದಿ ದಿನಾಂಕ **20.08.2011** ರಂದು ಬರೆದಿರುವ ಪತ್ರ, ಎರಡನೇ ಪ್ರತಿವಾದಿ ದಿನಾಂಕ **24.01.2012** ರಂದು ಬರೆದಿರುವ ಪತ್ರ, ದಿನಾಂಕ **16.01.2012** ರ ಪತ್ರ, ದಿನಾಂಕ **24.01.2012** ರ ಪತ್ರ, ದಿನಾಂಕ **13.10.2011** ರ ಎರಡು ಪತ್ರಗಳು, ರ, ದಿನಾಂಕ **24.01.2012** ರ ಪತ್ರ ಮತ್ತು ದಿನಾಂಕ **16.01.2012** ರ ಪತ್ರದ ಯಥಾ ನಕಲುಗಳು ಹಾಜರು ಪಡಿಸಿದ್ದು, ಅವುಗಳನ್ನು ನಿಡಿ-**32** ರಿಂದ ನಿಡಿ-**41** ಎಂದು ಗುರುತಿಸಲಾಯಿತು.

ವಾದಿಯು ನಾಲ್ಕನೇ ಪ್ರತಿವಾದಿಗೆ ದಿನಾಂಕ **11.11.2011** ರಂದು ಬರೆದಿರುವ ಪತ್ರವನ್ನು ಹಾಜರು ಪಡಿಸಿದ್ದು, ಅದನ್ನು ನಿಡಿ-**42** ಎಂದು ಗುರುತಿಸಲಾಯಿತು. ವಾದಿಯು ದಿನಾಂಕ **10.01.2012** ರಂದು ಮೂರನೇ ಪ್ರತಿವಾದಿಗೆ ಬರೆದಿರುವ ಪತ್ರ, ನಾಲ್ಕನೇ ಪ್ರತಿವಾದಿಯು ದಿನಾಂಕ **18.01.2012** ರಂದು ವಾದಿಗೆ ಬರೆದಿರುವ ಪತ್ರ, ದಿನಾಂಕ **16.02.2012** ರಂದು ಮೂರನೇ ಪ್ರತಿವಾದಿ ನಾಲ್ಕನೇ ಪ್ರತಿವಾದಿಗೆ ಬರೆದಿರುವ ಪತ್ರ, ವಾದಿಯು ದಿನಾಂಕ **27.02.2012** ರಂದು ನಾಲ್ಕನೇ ಪ್ರತಿವಾದಿಗೆ ಬರೆದಿರುವ ಪತ್ರ, ನಾಲ್ಕನೇ ಪ್ರತಿವಾದಿಯು ಮೂರನೇ ಪ್ರತಿವಾದಿಗೆ ದಿನಾಂಕ **27.03.2012** ರಂದು ಬರೆದಿರುವ ಪತ್ರ, ವಾದಿಯು ದಿನಾಂಕ **31.03.2012** ರಂದು ನಾಲ್ಕನೇ ಪ್ರತಿವಾದಿಗೆ ಬರೆದಿರುವ ಪತ್ರ, ನಾಲ್ಕನೇ ಪ್ರತಿವಾದಿಯು

ದಿನಾಂಕ **07.04.2012** ರಂದು ಮೂರನೇ ಪ್ರತಿವಾದಿಗೆ ಬರೆದಿರುವ ಪತ್ರ, ವಾದಿಯು ದಿನಾಂಕ **18.05.2012, 21.05.2012, 06.06.2012, 20.06.2012** ಮತ್ತು **11.07.2012** ರಂದು ಬರೆದಿರುವ ಪತ್ರಗಳು, ಒಂದನೇ ಪ್ರತಿವಾದಿಯು ಮೂರನೇ ಪ್ರತಿವಾದಿಗೆ ದಿನಾಂಕ **01.06.2012** ರಂದು ಬರೆದಿರುವ ಪತ್ರ, ನಾಲ್ಕನೇ ಪ್ರತಿವಾದಿಯು ಮೂರನೇ ಪ್ರತಿವಾದಿಗೆ ದಿನಾಂಕ **21.07.2012** ರಂದು ಬರೆದಿರುವ ಪತ್ರ, ವಾದಿಯು ದಿನಾಂಕ **08.08.2012** ರಂದು ಮೂರನೇ ಪ್ರತಿವಾದಿಗೆ ಬರೆದಿರುವ ಪತ್ರ, ಮೂರನೇ ಪ್ರತಿವಾದಿಯು ದಿನಾಂಕ **27.08.2012** ರಂದು ನಾಲ್ಕನೇ ಪ್ರತಿವಾದಿಗೆ ಬರೆದಿರುವ ಪತ್ರ ಮತ್ತು ಎರಡನೇ ಪ್ರತಿವಾದಿಯು ದಿನಾಂಕ **02.08.2012** ರಂದು ಮೂರನೇ ಪ್ರತಿವಾದಿಗೆ ಬರೆದಿರುವ ಪತ್ರ ಹಾಜರು ಪಡಿಸಿದ್ದು, ಅವುಗಳನ್ನು ಅನುಕ್ರಮವಾಗಿ ನಿಡಿ-**42** ರಿಂದ ನಿಡಿ-**59** ಎಂದು ಗುರುತಿಸಲಾಯಿತು.

ಪಂಚಾಯತ್ ಇಲಾಖೆಯ ಮುಖ್ಯ ಇಂಜಿನಿಯರರವರು ದಿನಾಂಕ **26.07.2012** ರಂದು ಮೂರನೇ ಪ್ರತಿವಾದಿಗೆ ಬರೆದಿರುವ ಪತ್ರ, ವಾದಿಯು ಮುಖ್ಯ ಇಂಜಿನಿಯರವರಿಗೆ ದಿನಾಂಕ **23.05.2012** ರಂದು ಬರೆದಿರುವ ಪತ್ರ, ದಿನಾಂಕ **17.08.2012** ರಂದು ವಾದಿಯು ಒಂದು ಮತ್ತು ಮೂರನೇ ಪ್ರತಿವಾದಿಗಳಿಗೆ ಕಳುಹಿಸಿರುವ ವಕೀಲರ ನೋಟಿಸ್ಸು, ದಿನಾಂಕ **27.08.2012** ರಂದು ಮೂರನೇ ಪ್ರತಿವಾದಿಯು ನಾಲ್ಕನೇ ಪ್ರತಿವಾದಿಗೆ ಕಳುಹಿಸಿರುವ ಪತ್ರ ಮತ್ತು ಮೂರನೇ ಪ್ರತಿವಾದಿಯು ವಾದಿಯ ವಕೀಲರಿಗೆ ಕಳುಹಿಸಿರುವ ದಿನಾಂಕ **18.10.2012** ರ ಉತ್ತರದ ನಕಲುಗಳನ್ನು ಹಾಜರು ಪಡಿಸಿರುತ್ತೇನೆ. (ಸದರಿ ದಾಖಲೆಗಳು ಜರಾಕ್ಸ ನಕಲುಗಳಾಗಿರುವ ಕಾರಣ ಅವುಗಳನ್ನು ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ.)

ವಾದಿಯು ದಿನಾಂಕ **24.09.2012** ರಂದು ನಾಲ್ಕನೇ ಪ್ರತಿವಾದಿಗೆ ಕಳುಹಿಸಿರುವ ಪತ್ರ, ನಾಲ್ಕನೇ ಪ್ರತಿವಾದಿಯು ದಿನಾಂಕ **03.10.2012** ರಂದು ಕಿರಿಯ ಇಂಜಿನಿಯರರವರಿಗೆ ಕಳುಹಿಸಿರುವ ಪತ್ರ, ಕಿರಿಯ ಇಂಜಿನಿಯರರವರು ದಿನಾಂಕ **10.10.2012** ರಂದು ನಾಲ್ಕನೇ ಪ್ರತಿವಾದಿಗೆ ಕಳುಹಿಸಿರುವ ಪತ್ರ, ನಾಲ್ಕನೇ ಪ್ರತಿವಾದಿಯು ಮೂರನೇ ಪ್ರತಿವಾದಿಗೆ ದಿನಾಂಕ **15.01.2013** ರಂದು ಬರೆದಿರುವ ಪತ್ರ ಮತ್ತು ಬೆಳಗಾವಿ ಜಿಲ್ಲಾಧಿಕಾರಿಯವರು ನಾಲ್ಕನೇ

ಪ್ರತಿವಾದಿಗೆ ದಿನಾಂಕ **29.12.2012** ರಂದು ಬರೆದಿರುವ ಪತ್ರ ಇವುಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನಿಡಿ-**60** ರಿಂದ ನಿಡಿ-**64** ಎಂದು ಗುರುತಿಸಲಾಯಿತು.

ಪಂಚಾಯತ್ ರಾಜ್ ಇಂಜಿನಿಯರ್ ಇಲಾಖೆಯ ಮುಖ್ಯ ಇಂಜಿನಿಯರ್ ಕಚೇರಿ ಆದೇಶವನ್ನು ಹಾಜರು ಪಡಿಸಿರುತ್ತೇನೆ. (ಸದರಿ ದಾಖಲೆ ಜರಾಕ್ಸ ನಕಲಾದ ಕಾರಣ ಅದನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ.) ಮೂರನೇ ಪ್ರತಿವಾದಿಯು ವಾದಿಗೆ ದಿನಾಂಕ **29.11.2012** ರಂದು ಬರೆದಿರುವ ಪತ್ರ, ಮೂರನೇ ಪ್ರತಿವಾದಿಯು ವಾದಿಗೆ ದಿನಾಂಕ **07.12.2012** ರಂದು ನೀಡಿರುವ ಅಂತಿಮ ನೋಟಿಸ್ಸು, ನಾಲ್ಕನೇ ಪ್ರತಿವಾದಿಯು ಮೂರನೇ ಪ್ರತಿವಾದಿಗೆ ದಿನಾಂಕ **12.12.2012** ರಂದು ಬರೆದಿರುವ ಪತ್ರ, ನಾಲ್ಕನೇ ಪ್ರತಿವಾದಿ ವಾದಿಗೆ ದಿನಾಂಕ **31.10.2012** ರಂದು ಬರೆದಿರುವ ಪತ್ರ, ವಾದಿಯು ದಿನಾಂಕ **03.12.2011** ರಂದು ಮೂರನೇ ಪ್ರತಿವಾದಿಗೆ ಬರೆದಿರುವ ಪತ್ರ, ನಾಲ್ಕನೇ ಪ್ರತಿವಾದಿಯು ವಾದಿಗೆ ದಿನಾಂಕ **15.03.2012** ರಂದು ಬರೆದಿರುವ ಪತ್ರ, ನಾಲ್ಕನೇ ಪ್ರತಿವಾದಿಯು ವಾದಿಗೆ ದಿನಾಂಕ **09.05.2012, 19.05.2012** ಮತ್ತು **18.07.2012** ರಂದು ಬರೆದಿರುವ ಪತ್ರಗಳು ಮತ್ತು ಕಿರಿಯ ಇಂಜಿನಿಯರವರು ನಾಲ್ಕನೇ ಪ್ರತಿವಾದಿಗೆ ದಿನಾಂಕ **15.09.2012** ರಂದು ಬರೆದಿರುವ ಪತ್ರವನ್ನು ಹಾಜರು ಪಡಿಸಿದ್ದು, ಅವುಗಳನ್ನು ಅನುಕ್ರಮವಾಗಿ ನಿಡಿ-**65** ರಿಂದ ನಿಡಿ-**74** ಎಂದು ಗುರುತಿಸಲಾಯಿತು.

ಪಂಚಾಯತ್ ರಾಜ್ ಇಲಾಖೆಯ ಮುಖ್ಯ ಇಂಜಿನಿಯರ್ ನಡವಳಿಕೆಯ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. (ಸದರಿ ದಾಖಲೆ ಜರಾಕ್ಸ ನಕಲಾದ ಕಾರಣ ಅದನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ.) ಕಿರಿಯ ಇಂಜಿನಿಯರವರು ದಿನಾಂಕ **07.12.2012** ರಂದು ನಾಲ್ಕನೇ ಪ್ರತಿವಾದಿಗೆ ಬರೆದಿರುವ ಪತ್ರವನ್ನು ಹಾಜರು ಪಡಿಸಿದ್ದು, ಅದನ್ನು ನಿಡಿ-**75** ಎಂದು ಗುರುತಿಸಲಾಯಿತು. **27** ಫೋಟೊಗಳು ಮತ್ತು ಅದಕ್ಕೆ ಸಂಬಂಧಪಟ್ಟ ಒಂದು ಸಿಡಿಯನ್ನು ಹಾಜರು ಪಡಿಸಿದ್ದು, ಸದರಿ ಫೋಟೊಗಳನ್ನು ಒಟ್ಟಾಗಿ ನಿಡಿ-**76** ಎಂದು ಮತ್ತು ಅದಕ್ಕೆ ಸಂಬಂಧಪಟ್ಟ ಸಿಡಿಯನ್ನು ನಿಡಿ-**77** ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಎರಡರಿಂದ ನಾಲ್ಕನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ವಿಚಾರಣೆಯನ್ನು ಮುಂದೂಡಲಾಗಿದೆ.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಕೇಳಿ, ಅವರು ಹೇಳಿದಂತೆಯೇ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಕೊಂಡು, ನಂತರ ಓದಿ ಹೇಳಲಾಯಿತು ಎಂದು ಈ ಮೂಲಕ ಪ್ರಮಾಣಿಕರಿಸಲಾಗಿದೆ.)

ಓ ಹೇ ಕೇ ಸರಿ ಇದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.